

# ಚಿಂತನೆಯ ಚಿಲುಮೆ ಕಾಮಿಡಿ ಕಿಲಾಡಿಗಳು!

**ಅನೀಶ್**
**ಝೀ ಕನ್ನಡದ 'ಕಾಮಿಡಿ ಕಿಲಾಡಿ' ನಟ**

◆ **ಲಾಕ್‌ಡೌನ್ ಅವಧಿಯಲ್ಲಿ ಏನು ಮಾಡಲು ಸಾಧ್ಯವಾಯಿತು?**

ಮೊದಲ ಅಲೆ, ಎರಡನೇ ಅಲೆ ಎಂದು ಎರಡು ಲಾಕ್‌ಡೌನ್ ಎದುರಾದವು. ಮೊದಲನೆಯ ಅವಧಿ ಭೀಕರವಾಗಿತ್ತು. ಕಲಾವಿದರು ಮಾತ್ರ ಅಲ್ಲ ಶ್ರೀಸಾಮಾನ್ಯನ ಬದುಕೂ ದುಸ್ತರವಾಗಿತ್ತು. ಆಗ ಒಂದು ಸಿನಿಮಾ ಮಾಡಲು ಯೋಚನೆ ಮಾಡಿದ್ದೆವು. ನಮ್ಮೂರ ಸುತ್ತಮುತ್ತಲ ಗೆಳೆಯರೇ ಸೇರಿಕೊಂಡು ಸಿನಿಮಾ ಬಗ್ಗೆ ಚಿಂತನೆ ಮಾಡಿದೆವು. ಆದರೆ ಚಿತ್ರೀಕರಣ ಮಾಡಲು ಸಾಧ್ಯ ಆಗಲಿಲ್ಲ. ಪ್ರಕೃತಿಗೆ ಸಂಬಂಧಪಟ್ಟಂತೆ ಸಿನಿಮಾ ಮಾಡುವ ಉದ್ದೇಶದಿಂದ ಸ್ಕ್ರಿಪ್ಟ್ ಕೂಡ ಬರೆದಿದ್ದೆವು. ಪ್ರಕೃತಿ, ಮನುಷ್ಯನ ಸ್ವಾರ್ಥ ಮತ್ತು ವೈವಿಧ್ಯ ಜೀವ ಜಗತ್ತನ್ನು ಕೇಂದ್ರೀಕರಿಸಿ ಕಥೆಯನ್ನು ರೂಪಿಸಿದೆವು.

'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ಸಂಬಂಧ ಸಾಮೂಹಿಕ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ರೂಪಿಸಿದ್ದೆವು. ಏಕಕಾಲಕ್ಕೆ 2000 ಮಕ್ಕಳು ತಮ್ಮ ತಮ್ಮ ಇಷ್ಟದ ಕಲೆಯನ್ನು ಆನ್‌ಲೈನ್‌ನಲ್ಲಿ ತೋರಿಸುವುದು. ಈ ಬಾರಿ ಕೂಡ ಸಿನಿಮಾ ಮಾಡುವ ಯೋಚನೆಯನ್ನು ಮಾಡಿದೆವು ಆದರೆ ಕಳೆದ ಬಾರಿಯಷ್ಟು ಬಿಡುವು ಈ ಬಾರಿ ಇರಲಿಲ್ಲ. ಒಂದಿಷ್ಟು ಚಟುವಟಿಕೆಯಿಂದ ಮತ್ತೊಂದು ಸಿನಿಮಾದ ಕನಸನ್ನು ಕಟ್ಟಿಕೊಂಡಿದ್ದೇವೆ.ನಮ್ಮದು ಹಳ್ಳಿ ಆಗಿದ್ದರಿಂದ ಕಳೆದ ಬಾರಿಯ ಸ್ಕ್ರಿಪ್ಟ್‌ಗೆ ಚಿತ್ರೀಕರಣ ಮಾಡಲು ಸಾಧ್ಯವಾಯಿತು. ಕೊರೊನಾ ತುಂಬ ಬಗೆಯಲ್ಲಿ ಹಾನಿಯನ್ನು ಉಂಟುಮಾಡಿದೆ. ಆದರೆ ಕೆಲವರಿಗೆ ಆನ್‌ಲೈನ್ ಲೈವ್ ಮೂಲಕ ಖ್ಯಾತಿಯಂತೂ ಸಿಕ್ಕಿದೆ. ಇದನ್ನು ಬಿಟ್ಟು ಈಬಾರಿ ಆತ್ಮೀಯರು ಕೊರೊನಾಕ್ಕೆ ತುಂಬ ಜನ ಬಲಿಯಾಗಿದ್ದಾರೆ.

◆ **ಬಣ್ಣ ನಿಮ್ಮನ್ನು ಸೆಳೆಯಿತೋ... ನೀವೇ ಬಣ್ಣವನ್ನು ಸೆಳೆದಿರೋ..**

ಕನ್ನಡದಲ್ಲಿ ಎಂಎ ಮಾಡಿಕೊಂಡು ಒಂದು ಶಾಲೆಯಲ್ಲಿ ಶಿಕ್ಷಕನಾಗಿದ್ದೆ. ಮಕ್ಕಳಿಗೆ ಪಾಠ ಮಾಡಿ ಆರಾಮಾಗಿಯೇ ಇದ್ದೆ. ನಾನು ಬಣ್ಣವನ್ನು ಸೆಳೆದುಕೊಂಡೆನೋ ಅಥವಾ ಬಣ್ಣವೇ ನನ್ನನ್ನು ಸೆಳೆದುಕೊಂಡಿತೋ ಗೊತ್ತಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ವೇದಿಕೆಯನ್ನು ಏರುವ ಆಸೆಯನ್ನು ಹೊಂದಿದ್ದೆ. ಆದರೆ ಅವಕಾಶಗಳು ಅಷ್ಟು ಸುಲಭಕ್ಕೆ ಸಿಗುವುದಿಲ್ಲ. ಯಾರಾದರೂ ಹಾಡಿದರೆ, ನಾಟಕ ಮಾಡಿದರೆ... ಆ ವೇದಿಕೆಯಲ್ಲಿ ನಾನೂ ಮಾಡಬೇಕು ಎನ್ನುವ ತುಡಿತ ಇತ್ತು. ಆದರೆ ಭಯ ಆಗುತ್ತಿತ್ತು., ಹೀಗಿರುವಾಗಲೇ ಶಾಲೆಯಲ್ಲಿ ಇದ್ದಾಗ ಶಿಕ್ಷಕರು ನನಗೆ ಶ್ರವಣ ಕುಮಾರನ ವೇಷ ಹಾಕಿ ಪ್ರತಿಭಾ ಕಾರಂಜಿಗೆ ಕಳಿಸಿದರು. ನನ್ನ ಆ ಮೊದಲ ನಟನೆಗೆ ಮೊದಲ ಬಹುಮಾನ ಬಂದಿತ್ತು. ಆ ಘಟನೆ ನನಗೆ ಸ್ಫೂರ್ತಿಯನ್ನು ತುಂಬಿತು. ಪದವಿ ತರಗತಿಯಲ್ಲಿ ಎನ್‌ಎಸ್‌ಎಸ್ ಕೂಡ ನನ್ನ ಪ್ರತಿಭೆಯನ್ನು ಅನಾವರಣ ಮಾಡಲು ಸಿಕ್ಕ ದೊಡ್ಡ ಅವಕಾಶ. ಸಣ್ಣ ಪುಟ್ಟ ಅವಕಾಶವನ್ನೂ ದೊಡ್ಡದಾಗಿ ಬಳಸಿಕೊಂಡೆ ಅಷ್ಟೆ. ಅದರ ಪ್ರತಿಫಲವಾಗಿ 'ಕಾಮಿಡಿ ಕಿಲಾಡಿ' ಎಂಬ ದೊಡ್ಡ ವೇದಿಕೆ ಸಿಕ್ಕಿದೆ.

◆ **ಅಧ್ಯಾಪಕ ಆಗಬೇಕಾದವನು, ಇಲ್ಲೇಲ್ಲೋ ಬಂದೆ ಅಂತ ಅನ್ನಿಸಿದೆಯಾ?**

ಹೌದು. ನನ್ನ ಶಾಲಾ ದಿನಗಳಲ್ಲಿಯೇ ಆಕರ್ಷಣೀಯ ನೌಕರಿ ಅಂದರೆ ಅಧ್ಯಾಪನ. ನಾವು ಅಂದುಕೊಂಡಿದ್ದು ಕೆಲವೊಮ್ಮೆ ಆಗುವುದಿಲ್ಲ. ನಾನು ಮಾಧ್ಯಮಿಕ ಶಾಲೆಯಲ್ಲಿ ಇದ್ದಾಗ ಚಿಕ್ಕಮಕ್ಕಳಿಗೆ ಪಾಠ ಮಾಡ್ತಾ ಇದ್ದೆ. ಅದೇ ನನಗಾಗ ಪ್ಯಾಶನ್. ಅದೇ ಆಸೆ ಕೂಡ ಇತ್ತು. ಬಣ್ಣ ಹಚ್ಚುವ ಕಲ್ಪನೆಯೇ ಇರಲಿಲ್ಲ. ಆದರೆ, ಐದು ವರ್ಷಗಳ ಹಿಂದೆ 'ಕಾಮಿಡಿ ಕಿಲಾಡಿಗಳು' ಆಡಿಷನ್ ನೀಡಿ ಇಲ್ಲಿಗೆ ಬಂದೆ. ಇಲ್ಲಿಗೆ ಹೇಗೆ ಬಂದೆ ಎನ್ನುವ ಕೌತುಕ ದೀರ್ಘಕಾಲ ಕಾಡಿದೆ. ಇಲ್ಲಿಗೆ ಬಂದ ನಂತರ ನನಗೊಂದು ಐಡೆಂಟಿಟಿ ಸಿಕ್ಕಿದೆ. ಸೆಲೆಬ್ರಿಟಿ ಎನ್ನುವ ಮಟ್ಟಿಗೆ ಜನಪ್ರಿಯತೆ ಸಿಕ್ಕಿದೆ. ಎರಡು ದೋಣಿಯಲ್ಲಿ ಕಾಲು ಇಡಲು ಸಾಧ್ಯ ಇಲ್ಲ ಎನ್ನುವುದಕ್ಕೆ ಶಿಕ್ಷಕ ವೃತ್ತಿಯನ್ನು ಬಿಡಬೇಕಾಯಿತು.

◆ **ಅಭಿನಯದಿಂದ ನಿಮ್ಮಲ್ಲಿ ಆದ ಬದಲಾವಣೆ ಏನು?**

ವಾಸ್ತವದಲ್ಲಿ ನಾನೊಬ್ಬ ಅಭಿನಯ ವಿದ್ಯಾರ್ಥಿ. ಆರಂಭದಿಂದ ಇಂದಿನ ತನಕವೂ ಅದನ್ನೇ ನಂಬಿಕೊಂಡಿದ್ದೇನೆ. ಅಭಿನಯ ತುಂಬ ಬದಲಾವಣೆಯನ್ನು ತಂದಿದೆ. ಮೊದಲು ಕೋಪ ಮೂಗಿನ ತುದಿಯ ಮೇಲೆ ಇರುತ್ತಿತ್ತು. ತಾಳ್ಮೆ ಇರಲಿಲ್ಲ, ಸುಮಾರು ಸಂಗತಿಗಳಿಗೆ ತಕ್ಷಣ ಪ್ರತಿಕ್ರಿಯೆ ನೀಡುತ್ತಿದ್ದೆ. ಇದು ತಕ್ಷಣದ ಪ್ರತಿಕ್ರಿಯೆಯನ್ನು ಶಮನ ಮಾಡಿದೆ. ನಿರಂತರ ಕಲಿಕೆಗೆ ಅವಕಾಶ ಸಿಕ್ಕಿದೆ. ಅಭಿನಯ ದೊಡ್ಡ ಸಾಗರ ಇಲ್ಲಿ ಕಲಿಯುತ್ತಲೇ ಇದ್ದೇನೆ. ಕೋಪ ಕಡಿಮೆಯಾಗಿ ತಾಳ್ಮೆಯನ್ನು ಕಲಿತಿದ್ದೇನೆ. ರಂಗಾಯಣದ ಗಣಪ, ನೀನಾಸಂನ ಪ್ರಭು ಅವರ ಜ್ಞಾನ ನನಗೆ ದೊಡ್ಡ ಶಕ್ತಿಯನ್ನು ಕೊಟ್ಟಿದೆ. ನಾನು ನಾನಾಗಿ ಇರುವುದು ಹೇಗೆ ಎನ್ನುವುದನ್ನೂ ಅಭಿನಯ ಕಲಿಸಿಕೊಟ್ಟಿದೆ.

◆ **ಕಾಮಿಡಿಗೆ ಸೀಮಿತ ಆಗಬಹುದು ಎಂಬ ಆತಂಕ ಇದೆಯಾ?**

ಹಾಗೆ ಅನಿಸಿಲ್ಲ. ಒಂದಿಷ್ಟು ಆಸೆಗಳು ಇವೆ. ಇಲ್ಲಿಗೆ ಬಂದ ನಂತರವೇ 'ಕನಸುಗಳು ಮಾರಾಟಕ್ಕೆ ಇವೆ' ಎಂಬ ಕಿರುಚಿತ್ರ ಮಾಡಿದೆವು. ಇಲ್ಲೇ ಅಂತಹ ಯೋಚನೆಯ ಬೀಜ ಮೊಳಕೆಯೊಡೆಯಲು ಸಾಧ್ಯವಾಗಿದೆ. ಮೊದಲು ಅದೆಲ್ಲ ಗೊತ್ತೇ ಇರಲಿಲ್ಲ. ಇನ್ನೂ ಏನೋ ಮಾಡಬೇಕು ಎನ್ನುವ ಕನಸಿನ ಬೀಜವನ್ನೂ ಕಾಮಿಡಿ ಕಿಲಾಡಿಗಳು ಬಿತ್ತಿದೆ. ಪಿಎಚ್‌ಡಿ ಮಾಡಬೇಕು ಎನ್ನುವ ಆಸೆಯೂ ಇದೆ. ನನ್ನ ಹೆಸರಿನ ಜೊತೆ ಡಾಕ್ಟರ್ ಎಂದು ಇರಬೇಕು ಎನ್ನುವ ಕನಸು ಇದೆ. ನಮ್ಮ ಸಿನಿಮಾದಲ್ಲಿ ಸಂಭಾಷಣೆ ಮತ್ತು ಚಿತ್ರಕತೆಯನ್ನು ಮಾಡಿದ್ದೇನೆ. ತಾಂತ್ರಿಕವಾಗಿ ಸಬಲನಾಗಬೇಕು. ನಿರ್ದೇಶಕ ಆಗಬೇಕು ಎನ್ನುವ ಆಸೆಯೂ ಇದೆ.

■ **ರಾಘವೇಂದ್ರ ಕೆ.**